‘ಮದುವೆ ಮಾಡಿಸುವಷ್ಟು ಪುರೋಹಿತಿಕೆ ಗೊತ್ತಾ?’

‘ಇಲ್ಲ, ಆದ್ರೆ ಅಲ್ಲಿ ಸುತ್ತಮುತ್ತ ಬೇರೇ ಜಾತಿಯವ್ರೇ ಜಾಸ್ತಿ. ಅವ್ರ ಮದುವೆಯಲ್ಲಿ ಮಂತ್ರಕ್ಕಿಂತ ತಂತ್ರವೇ ಮುಖ್ಯ. ಮಾಂಗಲ್ಯಧಾರಣೆ ಮಾಡಿಸಿ ಅರುಂಧತಿ ನಕ್ಷತ್ರ ತೋರಿಸುವುದು ಪ್ರಾಮುಖ್ಯ. ಆದ್ರೂ ಒಂದು ಸರ್ತಿ ಮಾಂಗಲ್ಯ ಕಟ್ಟಿಸದೇ, ಅರುಂಧತಿ ನಕ್ಷತ್ರ ತೋರಿಸಲು ಹೊರಟ್ಟಿದ್ದೆ. ‘ಇದೇನು ಭಟ್ರೇ, ತಾಳಿ ಕಟ್ಟಿಸದೇ, ಆಕಾಶ ತೋರಿಸ್ತೀರಲ್ಲಾ’ ಕೇಳಿದಾಗ ಎಡವಟ್ಟಿನ ಅರಿವಾಗಿ, ‘ಅಯ್ಯೋ, ಶಿವನೇ ಆಗ್ಲೇ ತಾಳಿಕಟ್ಟೀಯಂತ ಹೇಳಿದ್ನಲ್ಲಾ? ವಾದ್ಯ ಸದ್ದು, ನಿಮ್ಮ ಗಡಿಬಿಡಿಗೌಜಿನಲ್ಲಿ ಕೇಳಲಿಲ್ವೇನೋ! ಈಗ್ಲೂ ಮುಹೂರ್ತ ಮೀರಿಲ್ಲ. ತಾಳಿಕಟ್ಟಿ, ಆಕಾಶದಲ್ಲಿ ಅರುಂಧತಿ ನಕ್ಷತ್ರ ನೋಡಿ...’ ಅಂಥ್ಹೇಳಿ ಅವಘಡದಿಂದ ಪಾರಾದೆ!’

‘ಮಾವನ ಮನೆಲ್ಲೇ ಪೂಜೆಮಾಡಿಕೊಂಡು ಅರಾಮಾಗಿ ಇರೋದು ಬಿಟ್ಟು, ಮತ್ತ್ಯಾಕೆ ಊರಿಗೆ ಪದೇಪದೇ ಬರ್‍ತ್ತಿರ್‍ತೀಯೊ?’

‘ಅಲ್ಲಿ ಶುದ್ಧ ಬ್ರಾಹ್ಮಣನಾಗಿಯೇ ಇರಬೇಕು. ಎಷ್ಟು ದಿನಾಂತ ಹಾಗೆ ಫೋಸ್ ಕೊಟ್ಟುಕೊಂಡು ಇರೋದು, ಕುಡಿಯುವ ಹಾಗಿಲ್ಲ. ಇಸ್ಪೀಟ್ ಆಡೋಹಾಗಿಲ್ಲ. ಕೋಳಿ, ಮೀನು, ಮಾಂಸ ತಿನ್ನುವ ಹಾಗಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಸುಬ್ಬಿನ ಮರೆಯೋ ಹಾಗಿಲ್ಲ. ನಮ್ಮೋರೆಲ್ಲಾ ನನ್ನ ದೂರ ಮಾಡಿದ್ರೂ, ಕೆಳಜಾತಿಯವಳಾದ್ರೂ, ಸುಬ್ಬಿ ನನ್ನ ಕೈಬಿಡ್ಲಿಲ್ಲ. ಪ್ರೀತಿಯಿಂದ ಮಾಂಸದಡಿಗೆ ಮಾಡಿ ಬಡಸ್ತಾಳೆ. ಬಾಟ್ಲಿಗೆ ಸೋಡಾ ಬೆರಸಿ ಕೊಡ್ತಾಳೆ. ಯೋಗಕ್ಷೇಮ ವಿಚಾರಿಸಿಕೊಳ್ತಾಳೆ. ಮುಚ್ಚುಮರೆ ಮಾಡದೇ, ಉಪಚರಿಸಿ ತೆರೆದುಕೊಳ್ತಾಳೆ. ಅಲ್ಲಿಯ ದಕ್ಷಿಣೆ ದುಡ್ಡೆಲ್ಲಾ ಇವಳ ಮಡಿಲಿಗೆ ಸುರಿಯುತ್ತೇನೆ. ತಾಳೀ ಕಟ್ಟಿದವಳಿಗಿಂತ ಇವಳೇ ಒಂದು ತೂಕ ಜಾಸ್ತಿ ಕಣೋ ನನ್ನ ಪಾಲಿಗೆ’

‘ಈ ಇಸ್ಪೀಟು, ಕುಡಿತ, ಬಾಡೂಟ, ಎಲ್ಲಾ ಎಲ್ಲಿ ಕಲಿತೆ ಮಾರಾಯಾ?’

‘ಇದು ಅಪ್ಪನ ಕಾಲದಿಂದಲೂ ಬಂದ ಬಳುವಳಿಯಲ್ವಾ? ಕಾಲಕ್ಕೆ ತಕ್ಕ ಹಾಗೆ, ಗ್ರೇಡ್ ಬದಲಾಗಿದೆಯಷ್ಟೇ! ಅವರೆಲ್ಲಾ ಕಾಸಿಟ್ಟು ಇಪ್ಪತ್ತೆಂಟರಾಟ ಆಡಿದ್ದಾದರೆ, ನಾವು ಎರಡು, ಮೂರು ಸಾವಿರ ಬುಕ್ ರೆಮ್ಮಿ್ಯಯಾಡಿದೆವು. ಅವರು ಕಳ್ಳಭಟ್ಟಿ ಕುಡಿದರೆ, ನಾವು ಮಲ್ಯ, ಕೋಡೆ, ಫಾರಿನ್ ಬ್ರಾಂಡ್ ಉಡಾಯಿಸಿದೆವು!

ನೀನು ಬೆಂಗಳೂರಲ್ಲಿದ್ದಾಗ ನಮ್ಮೂರಲ್ಲಿ ಕೆಲವು ವರ್ಷಗಳ ಕಾಲ, ಇಸ್ಪೀಟಾಟ, ಕುಡಿತದ ಅಬ್ಬರ ಮೋಜು ನೋಡಬೇಕಾಗಿತ್ತು! ಮದುವೆ ಅಥವಾ ಯಾವ ವಿಶೇಷವೇ ಆಗಲಿ, ಹಬ್ಬವೇ ಇರಲಿ ಇಸ್ಪೀಟ್ ಚಾಂಪಿಯನ್ನರಿಗೆ ವಿಶೇಷ ಇನ್ವಿಟೇಷನ್! ನಾಲ್ಕೆಂಟು ಮಹಾಮಂಡಲ. ಊಟತಿಂಡಿ, ಹಗಲುರಾತ್ರೆ, ಹೊತ್ತು ಗೊತ್ತಿನ ಪರಿವೇಯಿಲ್ಲದೇ ಎರಡುಮೂರು ದಿನಗಳ ಮಹಾಮೇಳ. ಆದ್ರೆ ಒಂದು ಮಾತಂತೂ ಸತ್ಯ. ಗಳಿಸೋದಕ್ಕಿಂತ ಇಸ್ಪೀಟ್‌ನಲ್ಲಿ, ಕಳಕ್ಕೊಳ್ಳೋದೆ ಹೆಚ್ಚು. ಅದಕ್ಕೆ ನಾನೇ ಸಾಕ್ಷಿ! ವಿಶೇಷವೆಂದರೆ, ಗಳಿಸಿದ್ದಕ್ಕೆ ಸಿಗೋ ಪ್ರಚಾರ ಕಳಕೊಂಡಿದ್ದಕ್ಕೆ ಸಿಗೋಲ್ಲ! ಯಾಕೋ ಈಗೀಗ ಅದರ ಗೌಜು, ಅಬ್ಬರ ಕಮ್ಮಿಯಾಗಿದೆ. ಮನೆಯವರ ತರ್‍ಲೆ ತಕರಾರೇ ಕಾರಣವಿರಬಹುದು!

‘ಇಸ್ಪೀಟ್, ಕುಡಿತದ ಮೋಜಿನಲ್ಲೇ ತೀರ್ಥಳ್ಳಿ, ಶಿವಮೊಗ್ಗಾ, ಕೊಪ್ಪ, ಶೃಂಗೇರಿ, ಉಡುಪಿ, ಕುಂದಾಪುರ, ಮಂಗಳೂರು, ಅಲೆಯುತ್ತಿದ್ದಾಗ, ಕ್ಲಬ್, ಬಾರ್‌ಗಳಲ್ಲಿ ಅಂಟಿಕೊಂಡಿದ್ದು ಬಾಡಿನ ಗೀಳು...’

‘ಈಗ ಎಲ್ಲಿ ಕೆಲ್ಸ?’ ವಿಷಯಾಂತರಿಸಿದೆ.

‘ಉಮರಣ್ಣನ ಸಸಿಹಕ್ಲು ತೋಟದ ಬೇಸಾಯ. ಮರದ ಬುಡ ಬಿಡಿಸಿಯಾಗಿದೆ, ನಾಳೆ ಮಣ್ಣು ಹಾಕಬೇಕು. ಅಪ್ಪಾ ಮಾಡಿದ ತೋಟಕ್ಕೆ ಮಗ ಮಣ್ಣು ಹಾಕುವ ಗತಿ ಬಂತುನೋಡು! ಕಥೆ ಬರಿತೀಯಂತಲಾ? ವಂಶವೃಕ್ಷಕ್ಕಿಂತ ನನ್ನಅಪ್ಪನ ಕಥೆ ಬರೆದ್ರೆ, ಅದೇ ಚೆನ್ನಾಗಿರುತ್ತೆ ಅಲ್ವಾ?’ ವಿಷಾದದ ದನಿಯಲ್ಲಿ ಕೇಳಿದ.

ಊರು, ಹಿರಿಯರು, ವಂಶವೃಕ್ಷ, ಶೇಷಪ್ಪ. ಸಸಿಹಕ್ಲು ಅಮರೇಂದ್ರ ಸಮಸ್ತರೂ, ಸಮಸ್ತವೂ ಒಮ್ಮೆಲೇ ಕಣ್ಣಿಗೆ ಕಟ್ಟಿ, ವಿಚಿತ್ರ ತಳಮಳ. ಸಂಕಟ. ಎದ್ದು ಹೊರಡುತ್ತಾ ಹೇಳಿದೆ: ‘ಕಥೆಯೇನು? ಕಾದಂಬರಿಯೇ ಬರೆಯಬಹುದು.’

●